ಮಂಗಳೂರು ವಿವಿ ಮಟ್ಟದ ಟೂರ್ನಿ | ಅಂತರ್ ಕಾಲೇಜು ಮಹಿಳಾ ತಂಡಗಳ ಪಂದ್ಯ

# ಕಬಡ್ಡಿಯಲ್ಲಿ ಎಸ್‌ಡಿಎಂ ವಿನ್ನರ್, ಆಳ್ವಾಸ್ ರನ್ನರ್

**ಕಾರ್ಕಳ:** ಇಲ್ಲಿನ ಮಂಜುನಾಥ್ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾಲಯ ಮಟ್ಟದ ಅಂತರ್ ಕಾಲೇಜು ಮಹಿಳಾ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಉಜಿರೆ ಎಸ್‌ಡಿಎಂ ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿದೆ. ಸತತ 14 ವರ್ಷಗಳಿಂದ ಚಾಂಪಿಯನ್ ಆಗಿದ್ದ ಮೂಡುಬಿದಿರೆ ಆಳ್ವಾಸ್ ಕಾಲೇಜು ರನ್ನರ್ ಅಪ್‌ಗೆ ತೃಪ್ತಿಪಟ್ಟಿದೆ.

ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಎರಡೂ ತಂಡಗಳು ಜಿದ್ದಾಜಿದ್ದಿನ ಹೋರಾಟ ನಡೆಸಿದ್ದು, ಕೂದಲೆಳೆ ಅಂತರದಿಂದ ಎಸ್‌ಡಿಎಂ ತಂಡ ಜಯ ಸಾಧಿಸಿತು. ಆರಂಭದಲ್ಲಿ ಆಳ್ವಾಸ್ ಮುನ್ನಡೆ ಸಾಧಿಸಿದ್ದರೂ ಪಂದ್ಯ ಸಾಗುತ್ತಿದ್ದಂತೆ ಉಭಯ ತಂಡಗಳು ಸಮಬಲದ ಪ್ರದರ್ಶನ ನೀಡಿದವು. ಕೊನೆಯ ರೋಚಕ ಕ್ಷಣಗಳಲ್ಲಿ ಎದುರಾಳಿ ತಂಡವನ್ನು ಎಸ್‌ಡಿಎಂ ಪರಾಜಯಗೊಳಿಸಿತು.

ಎರಡು ದಿನಗಳ ಟೂರ್ನಿಯಲ್ಲಿ 34 ತಂಡಗಳು ಭಾಗವಹಿಸಿದ್ದವು. ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಶನ್ ತಂಡ ತೃತೀಯ ಸ್ಥಾನ ಪಡೆದರೆ, ಮಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಾರ್‌ಸ್ಟ್ರೀಟ್ ನಾಲ್ಕನೇ ಸ್ಥಾನ ಪಡೆಯಿತು. ಆಳ್ವಾಸ್ ಕಾಲೇಜಿನ ಆತ್ಮೀಯ ಅತ್ಯುತ್ತಮ ಡಿಫೆಂಡರ್, ಎಸ್‌ಡಿಎಂ ಕಾಲೇಜಿನ ಮಾನಸಾ ಅತ್ಯುತ್ತಮ ರೈಡರ್, ಎಸ್‌ಡಿಎಂ ಕಾಲೇಜಿನ ಕವಿತಾ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿಗೆ ಭಾಜನರಾದರು.



ಕಾರ್ಕಳದಲ್ಲಿ ನಡೆದ ಮಂಗಳೂರು ವಿವಿ ಮಟ್ಟದ ಅಂತರ್ ಕಾಲೇಜು ಮಹಿಳಾ ಕಬಡ್ಡಿ ಟೂರ್ನಿಯಲ್ಲಿ ಉಜಿರೆ ಎಸ್‌ಡಿಎಂ ಕಾಲೇಜು ಪ್ರಶಸ್ತಿ ಗೆದ್ದುಕೊಂಡಿತು. ಅಂತಾರಾಷ್ಟ್ರೀಯ ಕ್ರೀಡಾಪಟು ಅಪ್ಸರಾ ಆರ್.ಕಟೀಲು, ಕಾಲೇಜು ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಎಂ., ಮಂಗಳೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಕಿಶೋರ್ ಕುಮಾರ್ ಸಿ.ಕೆ. ಮತ್ತಿತರರಿದ್ದರು.

**ಪ್ರಶಸ್ತಿ ಪ್ರದಾನ ಸಮಾರಂಭ:** ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಾಲೇಜು ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಎಂ.ಅಧ್ಯಕ್ಷತೆ ವಹಿಸಿದ್ದರು. ಅಂತಾರಾಷ್ಟ್ರೀಯ ಕ್ರೀಡಾಪಟು ಅಪ್ಸರಾ ಆರ್.ಕಟೀಲು ಮುಖ್ಯ ಅತಿಥಿಯಾಗಿದ್ದರು. ಮಂಗಳೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕಿಶೋರ್ ಕುಮಾರ್ ಸಿ.ಕೆ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಪ್ರಭಾಕರ ಬಂಗೇರ, ಕಾರ್ಕಳ ಎಪಿಎಂಸಿ ಮಾಜಿ ಅಧ್ಯಕ್ಷ ಅತ್ತೂರು ಬಾಲಕೃಷ್ಣ ಹೆಗ್ಡೆ, ಪುರಸಭಾ ಸದಸ್ಯೆ ಮಮತಾ ಪೂಜಾರಿ, ದೈಹಿಕ ಶಿಕ್ಷಣ ನಿರ್ದೇಶಕ ಕೃಷ್ಣಮೂರ್ತಿ ವೈದ್ಯ ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕ ನವೀನ್ ಸ್ವಾಗತಿಸಿದರು. ಸಹಪ್ರಾಧ್ಯಾಪಕ ಯೋಗೇಶ್ ಡಿ.ಎಚ್.ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಿರ್ವಹಿಸಿದರು. ಕಾಲೇಜಿನ ಗ್ರಂಥಪಾಲಕ ವೆಂಕಟೇಶ್ ಕಾರ್ಯಕ್ರಮ ನಿರೂಪಿಸಿದರು.

## ಎಸ್‌ಡಿಎಂ ಕೈಹಿಡಿದ ಗೋಲ್ಡನ್ ರೈಡ್!

**ನಿಗದಿತ ಅವಧಿಯಲ್ಲಿ 39 -39 ಅಂಕಗಳೊಂದಿಗೆ ಎಸ್‌ಡಿಎಂ - ಆಳ್ವಾಸ್ ತಂಡಗಳು ಟೈ ಸಾಧಿಸಿದ್ದವು. ಮುಂದೆ ನಿರ್ಣಾಯಕರ ತೀರ್ಪಿನಂತೆ ಎರಡೂ ತಂಡಕ್ಕೂ ತಲಾ ಐದರಂತೆ ರೈಡ್ ಅವಕಾಶ ನೀಡಲಾಯಿತು. ಅದರಲ್ಲೂ ಸಮಬಲದ ಹೋರಾಟ ನಡೆಸಿತು. ಕೊನೆಯ ಹಂತದಲ್ಲಿ ಟಾಸ್ ಗೆದ್ದ ತಂಡಕ್ಕೆ ಗೋಲ್ಡನ್ ರೈಡ್ ಅವಕಾಶ ಲಭಿಸಿತು. ಟಾಸ್‌ನ ಅದೃಷ್ಟ ಉಜಿರೆ ಎಸ್‌ಡಿಎಂ ಕಾಲೇಜು ಪಾಲಾಯಿತು. ಆ ಮೂಲಕ ರೈಡ್ ಅವಕಾಶ ಪಡೆದ ಎಸ್‌ಡಿಎಂ ಕಾಲೇಜು ತಂಡ ಟಚ್ ಪಾಯಿಂಟ್ ಗಳಿಸಿ ಗೆಲ್ಲುವ ಅದೃಷ್ಟ ಪಡೆಯಿತು.**

## ಪ್ರಿಲಿಮಿನರಿ ಫಲಿತಾಂಶ

**ಪ್ರಿಲಿಮಿನರಿ ಸುತ್ತಿನಲ್ಲಿ ಡಾ.ಜಿ.ಶಂಕರ್ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜು ಅಜ್ಜರಕಾಡು ಪ್ರಥಮ, ಮಂಗಳೂರು ವಿವಿ ಕ್ಯಾಂಪಸ್ ಕಾಲೇಜು ದ್ವಿತೀಯ, ಸುಳ್ಯ ನೆಹರು ಮೆಮೊರಿಯಲ್ ಕಾಲೇಜು ತೃತೀಯ, ಆತಿಥೇಯ ಕಾರ್ಕಳ ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಾಲ್ಕನೇ ಸ್ಥಾನ ಪಡೆದವು. ಎನ್‌ಎಂಸಿ ಸುಳ್ಯದ ಆಶಾ ಅತ್ಯುತ್ತಮ ಡಿಫೆಂಡರ್, ಮಂಗಳೂರು ವಿವಿಯ ತೃಪ್ತಿ ಅತ್ಯುತ್ತಮ ರೈಡರ್, ಎಸ್‌ಡಿಎಂ ಕಾಲೇಜಿನ ನಿಧಿ ಎಂ.ಶೆಟ್ಟಿ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿ ಪಡೆದರು.**